# ಗ್ರಾಹಕರಿಗೆ ಅಗತ್ಯ ವಸ್ತುಗಳ ಪೂರೈಕೆಗಾಗಿ ಫ್ಲಿಪ್‌ಕಾರ್ಟ್–ಉಬರ್ ಒಪ್ಪಂದ

## – ಬೆಂಗಳೂರು, ಮುಂಬೈ ಮತ್ತು ದೆಹಲಿಗಳಲ್ಲಿ ಈ ಸೇವೆ ಲಭ್ಯ

ಬೆಂಗಳೂರು, ಏಪ್ರಿಲ್ 6, 2020:ದೇಶಾದ್ಯಂತ ಲಾಕ್‌ಡೌನ್ ಜಾರಿಯಲ್ಲಿರುವ ಹಿನ್ನೆಲೆಯಲ್ಲಿ ಬೆಂಗಳೂರು, ಮುಂಬೈ ಮತ್ತು ದೆಹಲಿಯ ನಾಗರಿಕರಿಗೆ ಅಗತ್ಯ ವಸ್ತುಗಳನ್ನು ಪೂರೈಸುವ ನಿಟ್ಟಿನಲ್ಲಿ ಭಾರತದ ಅತಿದೊಡ್ಡ ಇ–ಪ್ಲಾಟ್‌ಫಾರ್ಮ್ ಆಗಿರುವ ಫ್ಲಿಪ್‌ಕಾರ್ಟ್ ಮತ್ತು ಉಬರ್ ಒಪ್ಪಂದ ಮಾಡಿಕೊಂಡಿವೆ.

ಫ್ಲಿಪ್‌ಕಾರ್ಟ್ ಗ್ರಾಹಕರಿಂದ ಹೆಚ್ಚುತ್ತಿರುವ ಬೇಡಿಕೆಗಳ ಹಿನ್ನೆಲೆಯಲ್ಲಿ ಗ್ರಾಹಕರ ಮನೆ ಬಾಗಿಲಿಗೆ ಅಗತ್ಯ ವಸ್ತುಗಳನ್ನು ಪೂರೈಸಲು ಈ ಪಾಲುದಾರಿಕೆ ಸಹಕಾರಿಯಾಗಲಿದೆ. ಕೋವಿಡ್–19 ಹರಡುವುದನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಜಾರಿಗೆ ತಂದಿರುವ ಲಾಕ್‌ಡೌನ್ ಹಿನ್ನೆಲೆಯಲ್ಲಿ ಲಕ್ಷಾಂತರ ಜನರು ಮನೆಯಲ್ಲೇ ಉಳಿದಿದ್ದಾರೆ. ಇಂತಹ ನಾಗರಿಕರಿಗೆ ಈ ಪಾಲುದಾರಿಗೆ ನೆರವಾಗಲಿದೆ.

ಈ ಪಾಲುದಾರಿಕೆ ಬಗ್ಗೆ ಮಾತನಾಡಿದ ಫ್ಲಿಪ್‌ಕಾರ್ಟ್‌ನ ಚೀಫ್ ಕಾರ್ಪೊರೇಟ್ ಅಫೇರ್ಸ್ ಆಫೀಸರ್ ರಜನೀಶ್ ಕುಮಾರ್ ಅವರು, “ಪ್ರಸ್ತುತ ದೇಶಾದ್ಯಂತ ಲಾಕ್‌ಡೌನ್ ಇರುವ ಈ ಸಂದರ್ಭದಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ನಮ್ಮ ಮಾರಾಟಗಾರರು/ವೆಂಡರ್‌ಗಳು ನಾಗರಿಕರ ಮನೆ ಬಾಗಿಲುಗಳಿಗೆ ಅಗತ್ಯ ವಸ್ತುಗಳನ್ನು ತಲುಪಿಸುವುದಕ್ಕೆ ಈ ಪಾಲುದಾರಿಕೆ ನೆರವಾಗಲಿದೆ. ದೇಶಾದ್ಯಂತ ಕೋವಿಡ್–19 ವಿರುದ್ಧ ನಡೆಯುತ್ತಿರುವ ಹೋರಾಟಕ್ಕೆ ಫ್ಲಿಪ್‌ಕಾರ್ಟ್ ತನ್ನ ಸಂಪೂರ್ಣವಾದ ಬೆಂಬಲ ನೀಡುತ್ತಿದೆ. ಈ ಲಾಕ್‌ಡೌನ್ ಸಂದರ್ಭದಲ್ಲಿ ನಮ್ಮ ಗ್ರಾಹಕರಿಗೆ ಸಾಧ್ಯವಾದಷ್ಟು ಮಟ್ಟಿಗೆ ಲಭ್ಯವಿರುವ ಆಯ್ಕೆಗಳನ್ನು ಉಪಯೋಗಿಸಿಕೊಂಡು ಸೇವೆಗಳನ್ನು ಮುಂದುವರಿಸಲು ಬದ್ಧವಾಗಿದೆ. ಲಾಕ್‌ಡೌನ್‌ನಿಂದಾಗಿ ಮನೆಯಲ್ಲೇ ಇರುವ ಗ್ರಾಹಕರಿಗೆ ನಾವು ಅಗತ್ಯ ಸೇವೆಗಳನ್ನು ಪೂರೈಸುವ ಮೂಲಕ ಕೋವಿಡ್–19 ನಿರ್ಮೂಲನೆಗೆ ಸರ್ಕಾರಗಳು ಕೈಗೊಂಡಿರುವ ಕ್ರಮಗಳಿಗೆ ಬೆಂಬಲ ನೀಡುತ್ತಿದ್ದೇವೆ” ಎಂದು ತಿಳಿಸಿದರು.

ಉಬರ್ ಇಂಡಿಯಾ & ದಕ್ಷಿಣ ಏಷ್ಯಾದ ಕಾರ್ಯಾಚರಣೆ ನಿರ್ದೇಶಕ ಮತ್ತು ಹೆಡ್ ಆಫ್ ಸಿಟೀಸ್ ಆಗಿರುವ ಪ್ರಭ್‌ಜೀತ್ ಸಿಂಗ್ ಅವರು ಮಾತನಾಡಿ, “ಇಂದು ಫ್ಲಿಪ್‌ಕಾರ್ಟ್ ಜತೆಗೆ ಪಾಲುದಾರಿಕೆಯನ್ನು ಪ್ರಕಟಿಸಲು ಸಂತಸವಾಗುತ್ತಿದೆ. ಫ್ಲಿಪ್‌ಕಾರ್ಟ್‌ನೊಂದಿಗೆ ಸೇರಿ ನಾವು ಕಟ್ಟಕಡೆಯ ಮೈಲಿಯನ್ನು ತಲುಪಲು ಸಹಕಾರಿಯಾಗಲಿದೆ. ಲಕ್ಷಾಂತರ ಭಾರತೀಯರು ಮನೆಯಲ್ಲೇ ಇರುವ ಈ ಸಂದರ್ಭದಲ್ಲಿ ಆರ್ಥಿಕತೆ ಮುನ್ನಡೆಯಲು ಈ ಪಾಲುದಾರಿಕೆ ಸಹಕಾರಿಯಾಗಲಿದೆ ಮತ್ತು ಚಾಲಕರಿಗೆ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಅವಕಾಶವನ್ನು ಕಲ್ಪಿಸುತ್ತಿದೆ. ಈ ಸೇವೆಗೆ ಉಬರ್ ಯಾವುದೇ ಕಮೀಷನ್ ಅನ್ನು ಪಡೆಯುವುದಿಲ್ಲ, ಬದಲಾಗಿ ಇದರಿಂದ ಬರುವ ಆದಾಯ ಸಂಪೂರ್ಣವಾಗಿ ಚಾಲಕರಿಗೇ ತಲುಪಲಿದೆ” ಎಂದರು.

ಸರ್ಕಾರದ ಮಾರ್ಗಸೂಚಿಗಳನ್ವಯ ಉಬರ್‌ನ ಎಲ್ಲಾ ಚಾಲಕರಿಗೆ ಅಗತ್ಯ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅವರಿಗೆ ಮಾಸ್ಕ್, ಗ್ಲೌಸ್, ಸ್ಯಾನಿಟೈಸರ್ ಅನ್ನು ನೀಡಲಾಗುತ್ತಿದ್ದು, ಸುರಕ್ಷತೆಯ ಬಗ್ಗೆ ವಿಶೇಷ ತರಬೇತಿಯನ್ನೂ ನೀಡಲಾಗಿದೆ.

**About the Flipkart Group**

The Flipkart Group is one of India’s leading digital commerce entities and includes group companies Flipkart, Myntra, and PhonePe. Started in 2007, Flipkart has enabled millions of consumers, sellers, merchants and small businesses to be a part of India’s e-commerce revolution. With a registered customer base of over 200 million, offering over 150 million products across 80+ categories. Our efforts to democratize e-commerce in India, driving access and affordability, delight customers, create

lakhs of jobs in the ecosystem and empower generations of entrepreneurs and MSMEs has driven us to innovate on many industry firsts. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and PhonePe, India's fastest growing digital payments platform, the Flipkart Group is steering the transformation of commerce in India through technology.

**About Uber**

Uber's mission is to create opportunity through movement. We started in 2010 to solve a simple problem: how do you get access to a ride at the touch of a button? More than 15 billion trips later, we're building products to get people closer to where they want to be. By changing how people, food, and things move through cities, Uber is a platform that opens up the world to new possibilities.

**Agency Contact**

**Genesis BCW for Uber India**

Srishti Vasudeva

srishti.vasudeva@genesis-bcw.com | +91 9811335306

**For Flipkart**

**write to** media@flipkart.com